ಆಗಿತ್ತು. ಮತ್ತೆ ಹೊರಬಂದವಳೆ, 'ಎಲ್ಲಾ ನೀರೂ ಅಂಗೇ ಇಮಿರೋಗ್ಲಿ. ನಾನು ಮಾತ್ರ ಈ ಕಡಪಮೇಕೆ ಕುಕ್ಕರ್ತೀನಿ' ಎಂದು ಗೊಣಗುತ್ತಾ ಹೊಸ್ತಿಲ ಮೇಲೆ ಕುಳಿತುಕೊಂಡಳು.

ಅಂದು ಸಾಕಷ್ಟು ನೀರು ಕೆರೆಗೆ ಹರಿದು ಬಂತಾದ್ದರಿಂದ ಸಂಜೆಯ ವೇಳೆಗೆ ಮುಕ್ಕಾಲು ಭಾಗ ತುಂಬಿಕೊಂಡಿತು. ಹೊಸ ನೀರಿನ ಹರಿವಿಗೆ ಸಂಭ್ರಮದಿಂದ ಮೇಲೆ ಬಂದ ಮೀನುಗಳು ಕೆರೆಯ ಒಳ ಹರಿವುಗಳ ಕಡೆಗೆ ನುಗ್ಗತೊಡಗಿದವು. ಮೂರು–ನಾಲಕ್ಕು ಕೇಜಿ ತೂಗುವ ಕಾಟ್ಲಾ, ಮಾರುವೆ, ಜಿಲೇಬಿ... ಮೊದಲಾದ ಮೀನುಗಳು. ಕೆರೆಯ ಸೊಬಗನ್ನು ಕಣ್ತುಂಬಿಕೊಳ್ಳಲು ಹೋಗಿದ್ದ ಊರ ಮಂದಿ ಸಂಭ್ರಮದಲ್ಲಿ ಹರಿದಾಡುತ್ತಿದ್ದ ಮೀನುಗಳನ್ನು ಹಿಡಿದುಕೊಂಡು ಹುರುಪಿನಿಂದ ಊರ ಒಳಗೆ ಬಂದು ಬೀದಿಗಳಲ್ಲಿ ನಿಂತು ಎದುರಿಗೆ ಸಿಕ್ಕವರಿಗೆ 'ಟಾಕುಗಳಾಕ ಇದ್ದ ಮೀನ್ಗೋಳೆಲ್ಲ ಆಚಿಕೆ ಬಂದು ತೇಲಾಡ್ತಿವೆ... ಬಿರ್ನ ನೀವೂ ವೋಗಿ' ಎಂದು ಸಾರುತ್ತಾ ಓಡಾಡುವುದು ಸಾಮಾನ್ಯವಾಗಿಬಿಟ್ಟಿತು. ಹಾಗೆ ತಾನೂ ಮೀನುಗಳನ್ನು ಹಿಡಿದುಕೊಂಡು ಬಂದ ನಾಗರಾಜ ಅವುಗಳನ್ನು ತನ್ನ ಮನೆಯ ಸಂಪಿನೊಳಗೆ ಬಿಟ್ಟು ಮತ್ತೆ ಮೀನು ಹಿಡಿಯಲು ಕೆರೆಯ ಕಡೆಗೆ ಹೊರಟ. ಅವನ ಉದ್ದೇಶ ಎಷ್ಟಾಗುತ್ತೋ ಅಷ್ಟು ಮೀನುಗಳನ್ನು ಹಿಡಿದು ಸಂಪಿನೊಳಗೆ ಬಿಟ್ಟು ಬೇಕಾದಾಗ ಹಿಡಿದು ಸಾರು ಮಾಡಿಕೊಳ್ಳುವುದೋ ಅಥವಾ ಪಟ್ಟಣಕ್ಕೆ ಹೊಯ್ದು ಮಾರಿ ಒಂದಷ್ಟು ದುಡ್ಡು ಮಾಡಿಕೊಳ್ಳುವುದೋ ಆಗಿತ್ತು. ಹಾಗೆ ಹೊತ್ತು ಮುಳುಗುವ ವೇಳೆಗೆ ಐದಾರು ಬಾರಿ ಓಡಾಡಿದ್ದ. ಸಂಜೆಯಾಗುತ್ತಿದ್ದಂತೆ ಶಾರದಮ್ಮನ ಮನೆಯ ಮುಂದೆ ಸಾಗುತ್ತಿದ್ದ ರತ್ನಮ್ಮ, 'ಶಾರದಮ್ಮ ಒಂದು ಮಾರ್ವೆ ಮೀನು ಕೊಡ್ಲೆ. ಎಲ್ಡು ಕೇಜಿ ಐತೆ. ಮೀನುಳಿ ಮಾಡ್ಕೊ ಎಲ್ಡು ದಿನಕ್ಕಾಗುತ್ತೆ' ಎಂದು ನುಡಿದಳು. ಶಾರದಮ್ಮ ಏನೊಂದೂ ಮಾತನಾಡದೆ ಸುಮ್ಮನೆ ಕುಳಿತಿದ್ದಳು. ಇಂದು ತನ್ನ ಮನೆಯ ಒಲೆ ಉರಿಸಲಿಕ್ಕಾಗದೆಂದು ಇಡೀ ಊರಿಗೆ ಗೊತ್ತಿದ್ದರೂ ತನ್ನನ್ನು ಉರಿಸಲಿಕ್ಕಾಗಿಯೆ ಹೀಗೆ ಕೇಳುತ್ತಿದ್ದಾರೆಂದು ಅವಳಿಗೆ ಅನಿಸತೊಡಗಿತು. ಹಾಗಾಗಿಯೆ ಹೊಸ್ತಿಲ ಮೇಲೆ ಕುದಿಯುತ್ತಲೆ ಕುಳಿತಿದ್ದಳು. ರತ್ನಮ್ಮ 'ಅಯ್ಯೋ ನನ್ ಬುದ್ದೀಕೆ... ರಾತ್ರೀಕೆ ಉಣ್ಣಾಕೆ ನನ್ ಕಡಪದೊಳುಕೆ ಬಂದ್ಬಿಡು' ಎಂದು ನುಡಿಯುತ್ತಾ ತನ್ನ ದಾರಿ ಹಿಡಿದಳು. ರಾತ್ರಿ ಸುಮಾರು ಏಳೂವರೆಯ ಹೊತ್ತಿಗೆ ಶಾರದಮ್ಮನ ಬಳಿ ಬಂದ ರತ್ನಮ್ಮ ಬಲವಂತದಿಂದ ಎಬ್ಬಿಸಿ ಹೆಚ್ಚೂಕಮ್ಮಿ ಎಳೆದುಕೊಂಡೇ ತನ್ನ ಮನೆಗೆ ಕರೆದುಕೊಂಡು ಹೋದಳು. ಬೆಳಗ್ಗಿನಿಂದ ಏನೂ ತಿಂದಿಲ್ಲವಾದ್ದರಿಂದ ಶಾರದಮ್ಮಳ ಹೊಟ್ಟೆಗೆ ಬೆಂಕಿ ಬಿದ್ದ ಹಾಗಾಗಿತ್ತು. ಜೊತೆಗೆ ದೈಹಿಕ ಮತ್ತು ಮಾನಸಿಕ ಶ್ರಮಕ್ಕೆ ಈಡಾಗಿ ಕುಗ್ಗಿಹೋಗಿದ್ದಳು. ರತ್ನಮ್ಮನ ಮನೆಯಲ್ಲಿ ಹೊಟ್ಟೆ ತುಂಬ ಮಾರುವೆ ಮೀನಿನ ಸಾರು ಮತ್ತು ಮುದ್ದೆ ತಿಂದ ಮೇಲೆ ಕಣ್ಣು ತುಂಬಿಕೊಂಡು ಬಂತು. ರತ್ನಮ್ಮಳನ್ನು ಬಿಗಿಯಾಗಿ ಅಪ್ಪಿಕೊಂಡು ಬಿಕ್ಕಿದಳು. ಅವಳ ಮನಸ್ಸು ಹಗುರಾದಂತೆ ಅನಿಸತೊಡಗಿತು. ಒದ್ದೆ ಕಂಗಳಲ್ಲಿಯೇ ಅಲ್ಲಿಂದ

